ಹಾಳು ಮಾಡೋರೇ ಎಲ್ಲೆಲ್ಲೂ ವಿಜೃಂಭಿಸುತ್ತಿದ್ದಾರೆ. ದೇಶದ ಉದ್ದಗಲಕ್ಕೂ ಬರಿ ಸ್ಕೀಮುಗಳೂ, ಸ್ಕ್ಯಾಮುಗಳೇ. ನೀನೇನು ಹೇಳ್ತೀಯ ನಯ್ಯಾರ್...' ಎಂದು ಒಂದೇ ಧಾಟಿಯಲ್ಲಿ ಮಾತು ಮುಗಿಸಿದ್ದ. ಕೆ.ಎಮ್. ನಯ್ಯಾರ್ ಒಂಥರಾ ನಗುತ್ತಾ 'ನಿನ್ನ ಮಾತಿನ ಗರಗಸದಲ್ಲಿ ನನ್ನನ್ನೂ ಸೇರಿಸಿಕೊಂಡು ಕುಯ್ದುಬಿಟ್ಟಲ್ಲ ಕಾರ್ತಿಕೇಯನ್ ಮಾಪಿಳ್ಳೈ. ಆದರೂ ನಿನ್ನ ಮಾತುಗಳು ಖಂಡತವಾಗಿಯೂ ನೂರಕ್ಕೆ ನೂರು ಪಾಲು ಸತ್ಯ' ಎಂದಿದ್ದರು. 'ಹೆ ಹೇ ನಯ್ಯಾರ್, ಕಳೆದುಕೊಂಡಿದ್ದಕ್ಕೆ ನೀನು ಕನಿಷ್ಠ ಪಶ್ಚಾತ್ತಾಪಪಟ್ಟಿದ್ದನ್ನು ಇಷ್ಟೆಲ್ಲಾ ವರ್ಷಗಳಲ್ಲಿ ನಾನು ನೋಡಿದವನಲ್ಲ. ಕಷ್ಟದಲ್ಲಿರೋರಿಗೆ ನೀನು ನೆರವಾಗೋದನ್ನು ಇಲ್ಲಿ ಯಾರು ಕಂಡಿಲ್ಲ ಹೇಳು. ನಿನ್ನ ಅಣ್ಣ ಸುಧೀಂದ್ರ ನಯ್ಯಾರರೊಂದಿಗೆ ಸೇರಿ ನಡೆಸ್ತಿರೋ ಆ ಆಶ್ರಮವೇ ನಿನ್ನಲ್ಲಿರೋ ಮಾನವೀಯತೆಗೆ ಅತ್ಯಂತ ದೊಡ್ಡ ಸಾಕ್ಷಿ. ಇಷ್ಟಕ್ಕೂ ವೆಳ್ಳಿಯಪ್ಪನ ವ್ಯವಹಾರಕ್ಕೆ ಬಂಡವಾಳ ಹಾಕಿರೋನು ನೀನು. ಆಹಾ ಎಂಥ ಊಸರವಳ್ಳಿ ನೀನು ವೆಳ್ಳಿಯಪ್ಪ' ಎಂದ ಕಾರ್ತಿಕೇಯನ್ ಮಾಪಿಳ್ಳೈ ಮಾತುಗಳು ಅಲ್ಲಿದ್ದವರಿಗೇನೂ ಹೊಸದಾಗಿರಲಿಲ್ಲ. ಆತನ ಮಾತುಗಳಿಂದ ವೆಳ್ಳಿಯಪ್ಪನ ಮೋರೆ ಒಣಗಿ ಒಂದು ಕಡೆ ಮಂಕಾಗಿ ಕೂತುಬಿಟ್ಟಿದ್ದ.

ಅಷ್ಟರಲ್ಲಿ ಸುಮಾರು ಜನ ನಯ್ಯಾರ್ ಮನೆಯ ಹತ್ತಿರ ಬಂದಿದ್ದರು. ಅವರೆಲ್ಲರೂ ಪರಿಹಾರ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಕೆ.ಎಮ್. ನಯ್ಯಾರರೊಂದಿಗೆ ಜೊತೆಯಾಗಲು ಬಂದಿದ್ದರು. ಅವರಲ್ಲಿ ಮಾಜಿ ಮಂತ್ರಿಗಳು, ಮಾಜಿ ಎಂಎಲ್‌ಎಗಳು, ಲೋಕಲ್ ಲೀಡರ್‌ಗಳು, ಗುರುತಿಸಿಕೊಂಡ ಸಮಾಜ ಸೇವಕರು ಎಲ್ಲರೂ ಇದ್ದರು. ನೀರಿನ ಅಬ್ಬರ ಕಡಿಮೆಯಾಗಿ ಎತ್ತರದಲ್ಲಿದ್ದ ರಸ್ತೆಗಳಲ್ಲಿ ವಾಹನ ಸಂಚಾರ ಶುರುವಾಗಿತ್ತು. ತಗ್ಗಿನಲ್ಲಿ ಸಿಕ್ಕಿಹಾಕಿಕೊಂಡ ಮನೆಗಳ ಬಳಿ ಹೋಗಿ ಜನರಿಗೆ ಆಹಾರ, ನೀರು ಮತ್ತಿತರ ನೆರವು ನೀಡಲು ದೇಶಿ ಮತ್ತು ಮಿಷನ್ ಬೋಟುಗಳನ್ನು ಬಳಸಲಾಗುತ್ತಿತ್ತು. ಹೊಂಡು ನೀರಿನಲ್ಲಿ ದನಕರುಗಳು, ಹಾವುಗಳು ಕೊಚ್ಚಿ ಹೋಗುತ್ತಿದ್ದದ್ದು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿತ್ತು. ನೀರಿನಿಂದ ಆವೃತ್ತವಾಗಿದ್ದ ಮನೆಗಳ ಮೇಲೆ ನಿಂತು ಜನ ಎದೆ ಬಡಿದುಕೊಳ್ಳುತ್ತಿದ್ದ ದೃಶ್ಯಗಳು ಭಯಾನಕವಾಗಿದ್ದವು. ಕೆ.ಎಮ್. ನಯ್ಯಾರರೊಂದಿಗೆ ನಾನೂ, ಭಗವಾನ್ ಕುಟ್ಟಿ ಜೊತೆಯಾಗಿದ್ದವು. ಅವರು ಮುಂದೆ ಹೋಗುತ್ತಿದ್ದರೆ ನಾವು ಹಿಂಬಾಲಿಸುತ್ತಿದ್ದೆವು. ನಯ್ಯಾರ್ ಹೋದ ಕಡೆಯಲ್ಲೆಲ್ಲಾ ಜನರಲ್ಲಿ ಧೈರ್ಯ ಮತ್ತು ಆತ್ಮಸ್ಥೈರ್ಯವನ್ನು ತುಂಬುತ್ತಿದ್ದ ರೀತಿ ನಿಜಕ್ಕೂ ಅದ್ಭುತವಾಗಿತ್ತು. ಕೆಲವೊಂದು ಕಡೆ ಜೇಬಿನಿಂದ ಕ್ಯಾಶ್ ತೆಗೆದು ಕಷ್ಟದಲ್ಲಿರುವ ಜನರಿಗೆ ಕೊಡುತ್ತಿದ್ದ. ಒಂದು ಕಡೆ ಉನ್ನತ ಅಧಿಕಾರಿಯಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬರು ಬಂದು ನಯ್ಯಾರ್ ಹತ್ತಿರ ಏನೋ ಮನವಿಯನ್ನು ಮಾಡಿಕೊಳ್ಳುತ್ತಿದ್ದರು. ಭಗವಾನ್ ಕುಟ್ಟಿ ನನ್ನ ಹತ್ತಿರ ಬಂದು, 'ಆತ ಐಎಎಸ್ ಆಫೀಸರ್ ಪರಶುರಾಮ್ ಅಂತ. ಇದೇ ಊರು. ತಿರುವುನಂತಪುರಂನಲ್ಲಿ ಸೆಕ್ರೇಟರಿಯೇಟ್‌ನಲ್ಲಿ ಎಜುಕೇಶನ್ ಸೆಕ್ರೇಟರಿಯಾಗಿದ್ದಾನೆ. ಜಿಲ್ಲೆಯ ಫ್ಲಡ್ ಇನ್‌ಚಾರ್ಜ್ ಕೆಲಸ ಗಿಟ್ಟಿಸಿಕೊಳ್ಳಲು ಬಂದಿದ್ದಾನೆ. ಹೋದ ಸಾರಿ ಕೂಡಾ ಬಂದು ದುಂಬಾಲು ಬಿದ್ದಿದ್ದ. ಆದರೆ ನಯ್ಯಾರ್ ಕಿವಿಗೆ ಹಾಕಿಕೊಂಡಿರಲಿಲ್ಲ. ಫ್ಲಡ್ ಫಂಡ್ಸ್ ಸಿಕ್ಕಾಪಟ್ಟೆ ಬರುತ್ತೆ. ಅದರಲ್ಲಿ ಚೆನ್ನಾಗಿ ಹೊಡೀಬಹುದು. ಅದಕ್ಕೆ ಆಡಿಟ್ ಇರಲ್ಲ, ಏನೂ ಇರಲ್ಲ. ಈ ಮನುಷ್ಯ ಪರಶುರಾಮ್ ಹತ್ತು ತಲೆಮಾರಿಗೆ ಆಗುವಷ್ಟು ಮಾಡಿಟ್ಟಿದ್ದಾನೆ. ಇನ್ನೂ ಐದು ವರ್ಷ ಸರ್ವೀಸ್ ಇದೆ' ಎಂದು ಆತನ ಇತಿಹಾಸ ಹೇಳಿದ್ದ.

ದಿನಪೂರ್ತಿ ಓಡಾಡಿದ್ದೆವು. ನಾನೂ ಕೂಡಾ ಪರಿಹಾರ ಕಾರ್ಯಗಳಲ್ಲಿ ನಗುನಗುತ್ತಲೇ ಕೆ.ಎಮ್. ನಯ್ಯಾರ್ ಅವರಿಗೆ ಕೈ ಜೋಡಿಸಿದ್ದೆ. ಎಲ್ಲೋ ಊಟ ಮಾಡಿದ್ದೆವು, ಎಲ್ಲೋ ಚಹಾ ಕುಡಿದಿದ್ದೆವು. ನನಗೆ ಅದೊಂದು ಹೊಸ ಅನುಭವ. ಅರುಂಧತಿ ಪಿಳ್ಳೈ ಈಗ ಜೊತೆಯಲ್ಲಿದ್ದಿದ್ದರೆ ಎಂಬ ಆಲೋಚನೆ ಆಗಾಗ ಬಂದು ಬೇಸರವಾದರೂ ದುಃಖವಾಗುತ್ತಿರಲಿಲ್ಲ. ಮನಸ್ಸು ಮತ್ತು ದೇಹ ಎರಡರಲ್ಲೂ ಏನೋ ಆಗಾಧವಾದ ಒಂದು ರೀತಿಯ ಪರಿವರ್ತನೆಯಾದಂತೆ ಅನ್ನಿಸುತ್ತಿದ್ದರೂ ಅದೇನೆಂಬುದು ನಿರ್ದಿಷ್ಟವಾಗಿ ನನಗೆ ಅರಿವಾಗುತ್ತಿರಲಿಲ್ಲ.

ಸಂಜೆ ಕತ್ತಲಾಗುತ್ತಿದ್ದಂತೆ ನಾವು ನಯ್ಯಾರರ ಮನೆಗೆ ಹಿಂತಿರುಗಿದ್ದೆವು. ತುಂತುರು ಮಳೆ ಶುರುವಾಗಿತ್ತು. ನೆರೆದಿದ್ದ ಜನಸಂಖ್ಯೆ ಜಾಸ್ತಿಯಾಗಿತ್ತು. ನೆರೆಪೀಡಿತರಿಗೆ ಪಕ್ಕದ ಲೋಕೋಪಯೋಗಿ ಇಲಾಖೆಯ ಕಟ್ಟದಲ್ಲಿ ಊಟ, ವಸತಿಯನ್ನು ಏರ್ಪಡಿಸಲಾಗಿತ್ತು. ಉಸ್ತುವಾರಿ ಹೊತ್ತಿದ್ದ ಅಧಿಕಾರಿಯನ್ನು ಕರೆಸಿಕೊಂಡು ಕೆ.ಎಮ್. ನಯ್ಯಾರ್ ನೆರೆಪೀಡಿತರಿಗೆ ಯಾವುದೇ ಕೊರತೆಯಿಲ್ಲದಂತೆ ನೋಡಿಕೊಳ್ಳಬೇಕೆಂಬ ಎಚ್ಚರಿಕೆಯ ಸೂಚನೆಯನ್ನು ಕೊಟ್ಟು ಕಳಿಸಿದ್ದರು. ನಯ್ಯಾರರ ಮನೆಯಲ್ಲಿ ಅವರ ಆಪ್ತವಲಯಕ್ಕೆ ಊಟ, ವಸತಿಯ ಏರ್ಪಾಡು ಮಾಡಲಾಗಿತ್ತು. ಮನೆಯ ಅಂಗಳದಲ್ಲಿ ವೆಳ್ಳಿಯಪ್ಪ ಮತ್ತು ಕಾರ್ತಿಕೇಯನ್ ಮಾಪಿಳ್ಳೈ ಇಬ್ಬರೂ ಅಕ್ಕಪಕ್ಕ ಕುಳಿತು ನಗುತ್ತಾ ತುಂಬಾ ಸರಸ, ಸಂತಸದಿಂದ ಮಾತನಾಡುತ್ತಿದ್ದರು. ಅವರನ್ನು ತೋರಿಸುತ್ತಾ ಭಗವಾನ್ ಪಿಳ್ಳೈ 'ನೋಡಿ ಸಾಹೇಬ್ರೆ, ಬೆಳಿಗ್ಗೆ ಇಬ್ಬರೂ ಹಾವು ಮುಂಗುಸಿಯಂತೆ ಆಡುತ್ತಿದ್ದರು. ಈಗ ನೋಡಿ, ಒಳ್ಳೆ ಲವರ್ಸ್ ಥರಾ ಇದಾರೆ. ಕಾರ್ತಿಕೇಯನ್ ಮಾಪಿಳ್ಳೈ ಇದಾನಲ್ಲ, ಇವನಿಗೆ ತನ್ನ ಹೆಂಡತಿ ಮರಳಿ ಹಿಂದಕ್ಕೆ ಬರಬಹುದೆಂಬ ದೂರದ ಆಸೆ. ಈ ವಯಸ್ಸಿನಲ್ಲಿ ಅವಳು ವಾಪಸ್ಸು ಬಂದರೂ ತನ್ನೊಂದಿಗೆ ಇರಿಸಿಕೊಳ್ಳಲು ತಯಾರಿದ್ದಾನೆ ನಮ್ಮ ಮಾಪಿಳ್ಳೈ. ಹಾಗೆ ನೋಡಿದರೆ ಮೆಹ್ರೀನಳನ್ನು ಸೌದಿಗೆ ಸಾಗಿಹಾಕಿದವನು ಮಾಧವನ್ ಪಿಳ್ಳೈ. ಸೌದಿಯಲ್ಲಿ ಅವಳು ತುಂಬಾ ಸಿರಿವಂತಳಾಗಿ ಮೆರೀತಿದಾಳಂತೆ. ಮೂರು ಆಯಿಲ್ ಕಂಪನಿಗಳಿವೆಯಂತೆ. ನಾಲ್ಕು ಜನ ಮಕ್ಕಳಂತೆ. ಮಗಳಿಗೆ ಮದುವೆಯಾಗಿದೆಯಂತೆ. ವಾರದ ಹಿಂದೆ ಇದನ್ನೆಲ್ಲಾ ಮಾಧವನ್ ಪಿಳ್ಳೈಗೆ ಅರುಂಧತಿ ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಂಡಿದ್ದೇನೆ.

ಹೆಣ್ಣಿಗೆ ಗಂಡು ಬರಿ ಲೈಂಗಿಕ ತೃಪ್ತಿ ಕೊಟ್ಟರೆ ಸಾಲದು, ಅವಳಿಗೆ ಅದರಾಚೆ ಬೇರೇನೋ ಬೇಕಿರುತ್ತದೆ. ಇಲ್ಲದಿದ್ದಲ್ಲಿ ಜಗತ್ತಿನಾದ್ಯಂತ ಕೋಟಿ ಕೋಟಿ ಹೆಣ್ಣು ಗಂಡುಗಳ ನಡುವೆ ಅನೈತಿಕ ಸಂಬಂಧಗಳಾದರೂ ಏಕೆ ಹುಟ್ಟಿಕೊಳ್ಳುತ್ತಿದ್ದವು. ಲಕ್ಷಾಂತರ ದಂಪತಿಗಳು ವಿವಾಹ ವಿಚ್ಛೇದನಗಳನ್ನೇಕೆ ತೆಗೆದುಕೊಳ್ಳುತ್ತಿದ್ದರು. ನಮ್ಮ ಕೆ.ಎಮ್. ನಯ್ಯಾರರಿಗೆ ಒಟ್ಟೊಟ್ಟಿಗೆ ಹಾವು ಮುಂಗುಸಿಗಳನ್ನು, ನಾಯಿ ನರಿಗಳನ್ನು, ಹುಲಿ ಸಿಂಹಗಳನ್ನು ಸಾಕುವ ವಿದ್ಯೆ ಗೊತ್ತು. ಅವುಗಳನ್ನು ಪರಸ್ಪರ ಪ್ರೀತಿಯಿಂದ ಯಾವಾಗ ಇಡಬೇಕು ಮತ್ತು ಒಂದರ ಮೇಲೆ ಇನ್ನೊಂದನ್ನು ಬಿಟ್ಟು ಯಾವಾಗ ಯುದ್ಧ ಮಾಡಿಸಬೇಕೆಂಬುದೂ

## ಕಳೆದ ಸಂಚಿಕೆಯಲ್ಲಿ



ಕೆ.ಎಮ್. ನಯ್ಯಾರ್ ಮತ್ತು ಕ್ರಾಂತಿ ರೆಡ್ಡಿಯ ನಡುವಣ ಸಂವಾದ ಲೋಕದ ಸಂಗತಿಗಳೊಂದಿಗೆ, ನಯ್ಯಾರ್ ಅವರು ವ್ಯವಹಾರದಲ್ಲಿ ಎದುರಿಸುತ್ತಿರುವ ಸಂಕಟಗಳನ್ನೂ ಒಳಗೊಂಡಿತ್ತು. ಆ ಮಾತುಕತೆಯನ್ನೇ ಮೆಲುಕು ಹಾಕುತ್ತಾ ಮಲಗಿದ್ದ ಕ್ರಾಂತಿ ರೆಡ್ಡಿಗೆ ಅಚಾನಕ್ಕಾಗಿ ಎಚ್ಚರವಾದಾಗ, ಸುತ್ತಮುತ್ತಲಿನ ಪರಿಸರದಲ್ಲಿ ಉದ್ವಿಗ್ನತೆ ಕಾಣಿಸುತ್ತಿತ್ತು. ಜೋರು ಮಳೆ ಹಾಗೂ ನೀರು ಹರಿಯುತ್ತಿರುವ ಸದ್ದು. ನಯ್ಯಾರ್ ಅವರ ಮನೆ ಜನರಿಂದ ತುಂಬಿತ್ತು. ಸಾವುನೋವಿನ ಆತಂಕದಲ್ಲಿ ರಾತ್ರಿ ಕಳೆದರೆ, ಅತ್ತ ಕಡೆಯಿಂದ ಬಂದುದು ಸಾವಿನ ಸುದ್ದಿ. ಮಾಧವನ್ ಪಿಳ್ಳೈ ಹಾಗೂ ಡಾ. ಅರುಂಧತಿ ಪಿಳ್ಳೈ ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಕೆಲವು ತಾಸುಗಳ ಹಿಂದಷ್ಟೇ ಮೈಮನಗಳನ್ನು ಹಂಚಿಕೊಂಡಿದ್ದ ಹೆಣ್ಣಿನ ಸಾವಿನ ಸುದ್ದಿ ಕ್ರಾಂತಿ ರೆಡ್ಡಿಯನ್ನು ಕಂಗೆಡಿಸಿತು. ಆ ಸಮಯದಲ್ಲೇ ವಿಚ್ಛೇದನ ಹೊಸ್ತಿಲಲ್ಲಿದ್ದ ಹೆಂಡತಿಯ ಫೋನ್ ಕರೆ ಬಂತು.